
# ಜಪಾನಿ ಕವಿ ಇಸ್ಸಾ ಹೈಕುಗಳು


● ಮೂಲ: ಕೊಬಯಾಷಿ ಇಸ್ಸಾ
ಕನ್ನಡಕ್ಕೆ: ಡಾವೆಂಕಿ
ಕಲೆ: ವೆಂಕಟ್ರಮಣ ಭಟ್



ಆಕಾಶಗಂಗೆ–
ಮಲಗಬಹುದೆ ಒಂಟಿ
ನನ್ನ ನಕ್ಷತ್ರ

ಮರಿಜೇಡಗಳೆಲ್ಲ
ಚೆಲ್ಲಾಪಿಲ್ಲಿ
ಬದುಕು ಮಾಡುವುದಕ್ಕೆ

ಮಲಗಿರುವವನ ಮೇಲೆ
ಎರಗುವುದು ಸೊಳ್ಳೆ
ಮಧ್ಯಾಹ್ನದ ಊಟಕ್ಕೆ



ಹಾವಿನ ಹುತ್ತದೊಳಗೆ
ಓ ಮೂರ್ಖ
ಮೂಷಿಕ

ಭತ್ತದ ಗದ್ದೆಯ ಸಾಲಲ್ಲಿ
ಬುದ್ಧನ ಹೊಗಳುತ್ತಿವೆ
ಕಪ್ಪೆಗಳು





ಮಿಂಚು–
ನಾಯಿಯ ಮುಖ ಮಾತ್ರ
ಮುಗ್ಧ